# ಈ ದೇಹಕ್ಕೆ ಮಾತಾಡಲು ಬಿಡಿ

(ತಮಿಳು ಮೂಲ: ಸಲ್ಮಾ - ಕನ್ನಡ ರೂಪಾಂತರ: ಮಮತಾ ಜಿ. ಸಾಗರ)

ದೇಹದ ಮೇಲೆ ನಂಬಿಕೆ ಇಟ್ಟರೆ ಮಾತ್ರ
ನನ್ನೀ ದೇಹ ನಿಮ್ಮೊಂದಿಗೆ ಮಾತಾಡುತ್ತದೆ.
ನನ್ನ ಸತ್ಯಗಳನ್ನು ನಿಮ್ಮ ಕಿವಿಯಲ್ಲಿ ಉಸುರಲು ಬಿಡಿ
ಸ್ಪಷ್ಟವಾಗಿ, ನಿಚ್ಚಳವಾಗಿ, ಅಡೆತಡೆ ಇಲ್ಲದೆ...

ಆಡಲಿ ಮಾತು, ಪಡಿಸಿಕೊಳ್ಳಲಿ ತನ್ನನ್ನು ತಾನು ಸಾಬೀತು.
ನಾಲ್ಕು ಗೋಡೆಗಳೊಳಗೆ ನನ್ನ ಗೃಹ ಬಂಧನದ ನೋವ ನೋಯುತ್ತಲೇ
ಚಿಗಿತ ಮೂಲೆಗಳ ಜೊತೆಗಿದು ಆಡಿದ
ಸಮರ ಸಂಘರ್ಷಗಳ ಕುರಿತು ಹೇಳಲು ಬಿಡಿ.

ಮುಜುಗರದಲ್ಲೇ ಮಾತಾಡಲಿ, ಹಳೆಯ ತುಂಡು ಬಟ್ಟೆ
ಹೀರಿಕೊಂಡ ಆ ನೋವುಗಳ ಬಗ್ಗೆ, ನನ್ನ ಮೊದಲ ರಕ್ತದ
ಕೆಂಪು ಮಕಮಲ್ಲು ಕಮೋಡಿನ ಬಿಳಿಯ
ಇಳಿಜಾರಾ ಬಳಸಿ ಅಲಂಕರಿಸಿದ್ದರ ಬಗ್ಗೆ ಹೇಳಲು ಬಿಡಿ.

ಹಾಡಲು ಬಿಡಿ ತಲತಲಾಂತರದಿಂದ ಹೆಣಗಿ ಕೂಡಿಟ್ಟುಕೊಂಡ
ಮುದ, ಮಧುರ, ಶೃಂಗಾರ ರಾಗಗಳ.
ಕಾಮ ಪ್ರೇಮ ಕಾರಂಜಿಗಳ ಬಗ್ಗೆ
ಹುಗಿದು ಹೂತು ಹೋದ ಹಲುಬಿದಾಸೆಗಳ ಬಗ್ಗೆ.

ಅಪರಿಚಿತ ಪಲ್ಲಂಗದ ಮೇಲೆ
ಪರಿಚಯವಿಲ್ಲದ ಅವರ ಕಾಮ ತೃಷೆಗಳ
ನೀಗಿಸುವ ಸಂಕಟದ ಕುರಿತು
ಹೇಳಲು ಬಿಡಿ.

ತಿಳಿಸಲಿ ಬಿಡಿ; ಮಕ್ಕಳ ಹಡಿವ, ಕಳೆದುಕೊಳ್ಳುವ ಬಗ್ಗೆ,
ಅದೆಷ್ಟೋ ಗಮಟು ಸ್ರಾವಗಳ ಬಗ್ಗೆ,
ಋತು ಬಂಧದ ಹಾದಿಯಲಿ ನಡೆದ ಇದರ ಮಂಡಿಯ ನೋವಿನ ಬಗ್ಗೆ
ಕೇಳುವಹಾಗೆ ಹೇಳಲಿ ಬಿಡಿ, ಬಹಿರಂಗವಾಗೇ.

ನಿಮಗೆ ತಿಳಿಯಬೇಕು ಮೂರ್ಖರೇ,
ಇದು ಕೇವಲ ನೀವು ಅತ್ಯಾಚಾರವೆಸಗುವ ದೇಹ ಮಾತ್ರವೇ ಅಲ್ಲ
ಇದೊಂದು ಘಾತಕ ಶಸ್ತ್ರ. ತನ್ನೊಳಗಿದು
ಜೀವಂತ ಪ್ರಕೃತಿ ಹಾಗೂ ಅದರ ರೌದ್ರಾವತಾರವನ್ನೇ
ಸಮೀಕರಿಸಿಕೊಂಡಿದೆ.

ದೇಹ ಮಾತಾಡುತ್ತದೆ.

***